**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 55-10**

| | | |
|---|---|---|
| ಹೆಸರು | ಕವಿತ | ಪ್ರಾ.ಸಾ.10 |
| .ಗಂಡನ ಹೆಸರು | ರಾಮಾಂಜಿ | ಚಾ.ಸಾ.6 |
| ವಯಸ್ಸು | 26 ವರ್ಷ | |
| ಕೆಲಸ | ಅಕೌಂಟೆಂಟ್ | ಸಾ.ಪ್ರ.ವ.ಬೋ |
| ಹಾಲಿ ವಾಸ | ಚಿಕ್ಕಬಳ್ಳಾಪುರ | ದಿ:-14.02.2019 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದಃ-**

ದಿ:16.11.2010ರಂದು ನಾನು ನಂದಗುಡಿಯಿಂದ ಯಡಕನಹಳ್ಳಿಗೆ ಆಟೋದಲ್ಲಿ ಹೋಗುತ್ತಿದ್ದೆ. ಅದರಲ್ಲಿ ಚಾಲಕನನ್ನು ಬಿಟ್ಟು 11 ಜನ ಇದ್ದೆವು. ಸದರಿ ಆಟೋ ಜೋರಾಗಿ ಹೋಗುತ್ತಿತ್ತು. ವಡ್ಡಹಳ್ಳಿ ಗೇಟ್ ಬಳಿ ಆಂಜನೇಯಸ್ವಾಮಿ ದೇವಸ್ಥಾನದ ಹಿಂದೆ ರಸ್ತೆಯ ಬಲಭಾಗದಲ್ಲಿ ಏಕಾಏಕಿ ಆಟೋವನ್ನು ಕ್ರಾಸ್ ಮಾಡಿದಾಗ ಎರಡು ಪಲ್ಟಿಯಾಗಿರುತ್ತದೆ. ಆಗ ನನಗೆ ಪ್ರಜ್ಞೆ ತಪ್ಪಿ ಹೋಗಿರುತ್ತದೆ. ನನಗೆ ಎಡಕೈಗೆ ಮತ್ತು ಮೊಣಕಾಲಿಗೆ ಗಾಯವಾಗಿರುತ್ತದೆ. ಉಳಿದವರಿಗೂ ಸಣ್ಣಪುಟ್ಟ ಗಾಯಗಳಾಗಿದ್ದವು. ರಾಮಾಂಜಿ ಮತ್ತು ಇನ್ನೊಬ್ಬರಿಗೆ ತೀವ್ರ ಗಾಯಗಳಾಗಿತ್ತು. ನಂತರ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಅಪಘಾತದಿಂದ ರಾಮಾಂಜಿನಿ ಎನ್ನುವವರು ತೀರಿಹೋದ ಕುರಿತು ನಂತರ ಗೊತ್ತಾಗಿರುತ್ತದೆ. ಅಪಘಾತವು ಆಟೋ ಚಾಲಕನ ತಪ್ಪಿನಿಂದಾಗಿರುತ್ತದೆ. ಸಾಕ್ಷಿ ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

**ಆರೋಪಿ ಪರ ವಕೀಲರಿಂದ: ಪಾಟೀ ಸವಾಲು:-**

ಅಪಘಾತವಾದಾಗ ನಾನು ವ್ಯಾಸಂಗ ಮಾಡುತ್ತಿದ್ದೆ. ಅಪಘಾತವಾದಾಗ ಮದ್ಯಾಹ್ನ 2 ಗಂಟೆಯಾಗಿತ್ತು. ನನಗೆ ಆಟೋ ನಂಬರ್ ಗೊತ್ತಿಲ್ಲ. ಆಟೋದಲ್ಲಿ ಆಂಜಿನಪ್ಪ, ದಾಸಪ್ಪ ಇದ್ದರು, ಉಳಿದವರ ಹೆಸರು ಹೇಳಲು ಗೊತ್ತಿಲ್ಲ. ಆರೋಪಿ ಆ ದಿನ ಯಾವ ಬಟ್ಟೆ ಹಾಕಿದ್ದ ಎಂದು ನೆನಪಿಲ್ಲ. ಅಪಘಾತದ ಸ್ಥಳದ ಚೆಕ್ಕುಬಂದಿ ಪೂರ್ವದ ಕಡೆ ಯಡಕನಹಳ್ಳಿ, ಪಶ್ಚಿಮದ ಕಡೆ ನಂದಗುಡಿ, ಉತ್ತರದ ಕಡೆ ವಡ್ಡಹಳ್ಳಿ ಹಾಗೂ ದಕ್ಷಿಣದ ಕಡೆ ಮುದ್ದನಹಳ್ಳಿ ಇರುತ್ತದೆ.

ರಸ್ತೆ ಸ್ಥಳದಲ್ಲಿ ದೊಡ್ಡದಾಗಿತ್ತು. ಅಪಘಾತವಾದ ನಂತರ ನನಗೆ ಜ್ಞಾನ ಇರಲಿಲ್ಲ ಎಂದರೆ ಸರಿ. ಆಗ ಯಾರು ಯಾರು ಎಲ್ಲೆಲ್ಲಿ ಕುಳಿತಿದ್ದರು ಎಂದು ಆ ಕ್ಷಣಕ್ಕೆ ನನಗೆ ಗೊತ್ತಾಗಲಿಲ್ಲ ಎಂದರೆ ಸರಿ. ನಾನು ಪೋಲೀಸರ ಮಾತುಕೇಳಿ ಆರೋಪಿಯ ಮೇಲೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗದೆ ಇದ್ದರೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಆರೋಪಿ ನಾನು ಹೇಳಿದಂತೆ ಯಾವುದೇ

ಆಟೋವನ್ನು ಚಲಾಯಿಸುತ್ತಿರಲಿಲ್ಲ, ಆರೋಪಿಯ ತಪ್ಪಿನಿಂದ ಯಾವುದೆ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**